ಅ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ವ್ಯಾಪ್ತಿಯಲ್ಲಿ 2007–08, 2008–09 ಮತ್ತು 2009–10 ಸಾಲುಗಳಲ್ಲಿ N.R.E.G.A. ಯೋಜನೆಯಡಿ ಕೈಗೆತ್ತಿಕೊಂಡು ಪೂರ್ಣಗೊಳಿಸಲಾದ ಕಾಮಗಾರಿಗಳು ಎಷ್ಟು (ಗ್ರಾಮ ಪಂಚಾಯಿತಿ, ಕಾಮಗಾರಿ ನಡೆದ ಸ್ಥಳ, ಪ್ರಾರಂಭಿಸಿದ ದಿನಾಂಕ, ಮುಕ್ತಾಯ ದಿನಾಂಕ, ಪ್ರತಿ ಕಾಮಗಾರಿವಾರು ವಿವರ ನೀಡುವುದು);

ಆ) ಈ ಕಾಮಗಾರಿಗೆ ಬಿಡುಗಡೆಯಾದ ಅನುದಾನವೆಷ್ಟು; ಲೇಬರ್ ಕಾಂಪೊನೆಂಟ್‌ಗಳನ್ನು ಯಾವ ಬ್ಯಾಂಕ್‌ಗಳ ಮೂಲಕ ಕೂಲಿಕಾರರಿಗೆ ಬಟವಾಡೆ ಮಾಡಲಾಗಿದೆ;

ಇ) ಈ ಕಾಮಗಾರಿಗಳ ಪೈಕಿ ಎಷ್ಟು ಕಾಮಗಾರಿಗಳ ಬಗ್ಗೆ ಸಾರ್ವಜನಿಕರ ದೂರು ಬಂದಿದೆ; ಎಷ್ಟು ಪ್ರಕರಣಗಳಲ್ಲಿ ಇಲಾಖಾ ತನಿಖೆ ಪ್ರಾರಂಭಿಸಲಾಗಿದೆ (ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರಕ್ಕೆ ಸಂಬಂಧಿಸಿದ ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕಿನ ಗ್ರಾಮ ಪಂಚಾಯತಿಗಳ ಕಾಮಗಾರಿಗಳ ವಿವರಗಳನ್ನು ಕೋರಿದಂತೆ ಅನುಬಂಧದಲ್ಲಿ ಲಗತ್ತಿಸಿದೆ. ಒದಗಿಸಿರುವ ಅನುಬಂಧದ ಮಾಹಿತಿಯ ವಿವರಗಳು ದೊಡ್ಡ ಪ್ರಮಾಣದಲ್ಲಿರುವುದರಿಂದ ಸದರಿ ವಿವರಗಳನ್ನು ಸಂಬಂಧಿಸಿದ ಸದಸ್ಯರಿಗೆ ನೀಡಲು ಕೋರಿದೆ.

ಆ) ಶಿವಮೊಗ್ಗ ತಾಲ್ಲೂಕಿನಲ್ಲಿ ಏಳು ಕಾಮಗಾರಿಗಳ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದು, ಅದರಲ್ಲಿ ಮೂರು ದೂರುಗಳನ್ನು ಇತ್ಯರ್ಥಗೊಳಿಸಿದ್ದು ಇನ್ನುಳಿದ ನಾಲ್ಕು ದೂರುಗಳು ಪರಿಶೀಲನೆಯಲ್ಲಿದೆ. ಭದ್ರಾವತಿ ತಾಲ್ಲೂಕಿನಲ್ಲಿ ಒಂದು ಕಾಮಗಾರಿಯ ಬಗ್ಗೆ ದೂರು ಬಂದಿದ್ದು ಅದನ್ನು ಇತ್ಯರ್ಥ ಗೊಳಿಸಲಾಗಿರುತ್ತದೆ.

ಪಶುವೈದ್ಯಕೀಯ ವಿಶ್ವವಿದ್ಯಾಲಯದ ಅಕ್ರಮಗಳು

442 (508) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ):– ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೀದರ್‌ನಲ್ಲಿ ನಡೆದ ಪಶುವೈದ್ಯಕೀಯ ವಿದ್ಯಾಲಯದ ಅವ್ಯವಹಾರಗಳ ಬಗ್ಗೆ ಗುಲ್ಬರ್ಗಾ ಪ್ರಾದೇಶಿಕ ಆಯುಕ್ತರು ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಮುಖ್ಯವಾದ ಅಂಶಗಳಿಂದಾಗಿ ಯಾವ ಯಾವ ಆರೋಪಗಳು ಸಾಬೀತಾಗಿದೆ ಎಂದು ವರದಿ ಮಾಡಿದ್ದಾರೆ (ವಿವರವಾದ ಮಾಹಿತಿ ಒದಗಿಸುವುದು);

ಆ) ಹಾಗಿದ್ದಲ್ಲಿ, ವಿಚಾರಣೆ ವರದಿಯಲ್ಲಿ ಶಿವಮೊಗ್ಗ ನಗರದ ಪಶುವೈದ್ಯ ಕಾಲೇಜು ಕಬ್ಬಿಣದ ಕಾಮಗಾರಿಯ ಹಗರಣವೂ ಸೇರಿದೆಯೇ; ಈ ಬಗ್ಗೆ ಸಾರ್ವಜನಿಕರಿಂದ ಬಂದ ದೂರುಗಳ ಬಗ್ಗೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರಿಸುವುದು)?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನ ಸಚಿವರು):–

ಅ) ಈ ಕೆಳಕಂಡ ಪ್ರಕರಣಗಳಲ್ಲಿ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅವ್ಯವಹಾರಗಳನ್ನು ಎಸಗಿರುತ್ತದೆ ಎಂದು ವರದಿಸಿರುತ್ತಾರೆ.

1) ಸಿಎಎಸ್ ಪದೋನ್ನತಿಗಳು

2) ಬ್ಯಾಕ್‌ಲಾಗ್ ನೇಮಕಾತಿಗಳು

3) 62 ಸಹಾಯಕ ಪ್ರಾಧ್ಯಾಪಕರ ನೇರ ನೇಮಕಾತಿಯಲ್ಲಿ ರೋಸ್ಟರ್ ಅನುಸರಿಸದೇ ಇರುವುದು

4) ನಿಯಮಾವಳಿಗಳಿಗೆ ವಿರುದ್ಧವಾಗಿ ಗುತ್ತಿಗೆ ನೌಕರರನ್ನು ಬಾಡಿಗೆಗೆ ಪಡೆದಿರುವುದು

5) ಡಾ॥ ಬಸವರಾಜುರವರನ್ನು ಡೀನ್ (ಮೀನುಗಾರಿಕೆ) ಆಗಿ ನೇಮಕಾತಿ ಮಾಡಿರುವುದು

6) NET ಸರ್ಟಿಫಿಕೇಟ್ ಪಡೆಯದೆ ನೇಮಕಾತಿಗಳನ್ನು ಮಾಡಿರುವುದು.

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸದರಿ ವಿಚಾರಣೆ ವರದಿಯಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ ಶಿವಮೊಗ್ಗ ಕುರಿತಂತೆ ಯಾವುದೇ ಪ್ರಸ್ತಾಪ ಮಾಡಿರುವುದಿಲ್ಲ ಹಾಗೂ ಕಾಮಗಾರಿ ಕುರಿತಂತೆ ಸಾರ್ವಜನಿಕರಿಂದ ಯಾವುದೇ ದೂರು ಬಂದಿರುವುದಿಲ್ಲ.

ಅನುಬಂಧ

ಅವ್ಯವಹಾರಗಳ ಬಗೆಗಿನ ಪೂರ್ಣ ವಿವರಗಳು

1. ಸಿ.ಎ.ಎಸ್ ಪದೋನ್ನತಿಗಳು:

ಸಿ.ಎ.ಎಸ್ 1996ರ ಯೋಜನೆಯಡಿಯಲ್ಲಿ ಅಸೋಸಿಯೇಟೆಡ್ ಪ್ರೊಫೆಸರ್ ಹುದ್ದೆಯಿಂದ ಪ್ರೊಫೆಸರ್ ಹುದ್ದೆಗೆ ಪದೋನ್ನತಿ ನೀಡುವಾಗ ಈ ಕೆಳಕಂಡ 15 ಪ್ರಾಧ್ಯಾಪಕರುಗಳಿಗೆ ಅಸೆಸ್‌ಮೆಂಟ್ ವರ್ಷದಲ್ಲಿ 5 ಪ್ರಕಟಣೆಗಳನ್ನು ಮಾಡಿರಬೇಕು ಎಂಬ ನಿಬಂಧನೆಯನ್ನು ಪೂರೈಸದೇ ಇದ್ದಾಗ್ಯೂ ಪದೋನ್ನತಿ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

1. ಡಾ॥ ಪಿ. ಕೇಶವ ಪ್ರಸಾದ್
2. ಡಾ॥ ಬಿ.ಎ. ಶಾಂಸುಂದರ್
3. ಡಾ॥ ಸಿದ್ದರಾಮಯ್ಯ ಗೌಡ
4. ಡಾ॥ ವೈ. ಬಸವರಾಜು
5. ಡಾ॥ ಎಂ.ಎನ್. ವೇಣುಗೋಪಾಲ್
6. ಡಾ॥ ಹೆಚ್.ಎನ್. ನರಸಿಂಹಮೂರ್ತಿ
7. ಡಾ॥ ಲಲಿತ್ ಅಚುತ್
8. ಡಾ॥ ವಿ.ಜಿ. ಭಟ್
9. ಡಾ॥ ನರಸಿಂಹಮೂರ್ತಿ
10. ಡಾ॥ ಪ್ಲೆಸಿಡ್ ಡಿ'ಸೋಜ
11. ಡಾ॥ ಆರ್. ಭಾಸ್ಕರನ್
12. ಡಾ॥ ಜಿಡಿಯನ್ ಗ್ಲೋರಿಡಾಸ್
13. ಡಾ॥ ಎಸ್.ಎಂ. ಶಿವಪ್ರಕಾಶ್
14. ಡಾ॥ ಎಸ್.ಎನ್. ಸತ್ಯನಾರಾಯಣಪ್ಪ
15. ಡಾ॥ ಕೆ.ವಿ. ಮೊಹಿರೆ

2. ಬ್ಯಾಕ್‌ಲಾಗ್ ನೇಮಕಾತಿಗಳು

ಬ್ಯಾಕ್‌ಲಾಗ್ ಅಡಿಯಲ್ಲಿ ಪ್ರಾಧ್ಯಾಪಕರುಗಳ ನೇಮಕಾತಿ ಮಾಡುವಾಗ ವಿಶ್ವವಿದ್ಯಾಲಯ ಈ ಕೆಳಕಂಡ 5 ಪ್ರಾಧ್ಯಾಪಕರುಗಳು ಅವರುಗಳು ಯುಜಿಸಿ/ಐಸಿಎಆರ್ ಮಾರ್ಗಸೂಚಿಯಂತೆ ನಿಗದಿತ ವಿದ್ಯಾರ್ಹತೆ ಹೊಂದದೇ ಇದ್ದರೂ ನೇಮಕಾತಿ ಮಾಡಲಾಗಿದೆ. ಇದನ್ನು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಗಮನಕ್ಕೆ ತಂದರೂ ಅದು ವಿರೋಧಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

1. ಡಾ॥ ಜಯನಾಯಕ್
2. ಡಾ॥ ಆರ್. ನಾಗರಾಜ್
3. ಡಾ॥ ಜಗದೀಶ್ ಸಂಗನಾಳ್
4. ಡಾ॥ ಬಿ.ಎನ್. ನಾಗರಾಜ್
5. ಡಾ॥ ಪಿ.ಟಿ. ರಮೇಶ್

3. 62 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇರ ನೇಮಕಾತಿಯಲ್ಲಿ ರೋಸ್ಟರ್ ಅನುಷ್ಠಾನಗೊಳಿಸದೇ ಇರುವುದು.

ಈ 62 ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 5 ಎಸ್‌ಬಿಸಿ 84, ದಿನಾಂಕ: 28.01.1987ರಂತೆ **ವಿಷಯವಾರು ರೋಸ್ಟರ್** ಪಾಲಿಸದೆ ಮೀಸಲಾತಿ ನೀತಿ ನಿಯಮಾವಳಿಗಳನ್ನು ಉಲ್ಲಂಘಿಸಲಾಗಿದೆ. ಇದನ್ನು ತನಿಖೆ ಸಮಯದಲ್ಲಿ ಸಮಾಜ ಕಲ್ಯಾಣ ಇಲಾಖೆ ಕೂಡ ಗುರುತಿಸಿರುತ್ತದೆ. ಅದನ್ನು ಉಪ ಕುಲಪತಿಗಳು ಮತ್ತು ಕುಲಸಚಿವರೂ ಒಪ್ಪಿರುತ್ತಾರೆ ಎಂದು ತಿಳಿಸಿರುತ್ತಾರೆ.

4. ನಿಯಮಗಳಿಗೆ ವಿರುದ್ಧವಾಗಿ ಗುತ್ತಿಗೆ ನೌಕರರನ್ನು ಬಾಡಿಗೆಗೆ ಪಡೆದಿರುವುದು.

ಗುತ್ತಿಗೆ ಆಧಾರದಲ್ಲಿ ನೌಕರರನ್ನು ನೇಮಿಸಿಕೊಳ್ಳಲು ಸರ್ಕಾರದ ನಿಷೇಧ ಇದ್ದರೂ, ಅದರ ಪೂರ್ವಾನುಮತಿ ಪಡೆಯದೆ, ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ತೀರ್ಮಾನಕ್ಕೆ ವಿರುದ್ಧವಾಗಿ, ಮಾನ್ಯತೆ ಪಡೆದ ಏಜೆನ್ಸಿಗಳಿಂದ ಟೆಂಡರ್ ಕರೆಯದೆ, ನೀತಿ ನಿಯಮಗಳನ್ನು ಉಲ್ಲಂಘಿಸಿ 348 ವ್ಯಕ್ತಿಗಳನ್ನು ನೇರವಾಗಿ 179 ದಿನಗಳಿಗೆ ಗುತ್ತಿಗೆ ಮೇಲೆ ನೇಮಿಸಿಕೊಂಡು ತದನಂತರ 4 ರಿಂದ 5 ವರ್ಷಗಳ ತನಕ ಮುಂದುವರೆಸಿದ್ದಾರೆ ಎಂದು ತಿಳಿಸಿದ್ದಾರೆ.

5. ಡಾ॥ ಬಸವರಾಜುರವರನ್ನು ಡೀನ್ (ಮೀನುಗಾರಿಕೆ) ಆಗಿ ನೇಮಕಾತಿ ಮಾಡಿರುವುದು

ವಿಷಯ ಪರಿಣಿತರು ನೀಡಿದ ವರದಿಯಂತೆ ಡಾ॥ ವೈ. ಬಸವರಾಜುರವರು ಡೀನ್ (ಮೀನುಗಾರಿಕೆ) ಹುದ್ದೆಗೆ ನಿಗದಿತ ವಿದ್ಯಾರ್ಹತೆ ಹೊಂದದೆ ಇದ್ದರೂ, ಅವರು ವಿಶೇಷ ಅವಾರ್ಡ್, ಮೆಡಲ್ ಪಡೆದಿದ್ದಾರೆ ಮತ್ತು ಹೊಸ ಬಗೆಯ ಮೀನು ಕಂಡು ಹಿಡಿದಿದ್ದಾರೆ ಎನ್ನುವ ಆಧಾರದ ಮೇಲೆ ಅವರಿಗೆ ಅಂಕ ನೀಡಿ ನೇಮಕಾತಿ ಮಾಡಿರುವುದು ನಿಯಮಾವಳಿಗಳಿಗೆ ವಿರುದ್ಧವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

6. NET ಸರ್ಟಿಫಿಕೇಟ್ ಪಡೆಯದೆ ನೇಮಕಾತಿಗಳನ್ನು ಮಾಡಿರುವುದು

62 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿ ಮಾಡುವಾಗ 8 ಅಭ್ಯರ್ಥಿಗಳಿಗೆ NET ಸರ್ಟಿಫಿಕೇಟ್ ಕೇಳದೆ, ಇಂಟರ್‌ನೆಟ್ ಫಲಿತಾಂಶದ ಪ್ರಿಂಟ್‌ಹೌಟ್‌ನ ಆಧಾರದ ಮೇಲೆ ಅವರಿಗೆ ಸಂದರ್ಶನ ನೀಡಿ, ನೇಮಕಾತಿ ಮಾಡಿರುವುದು ಯುಜಿಸಿ/ಐಸಿಎಆರ್ ನಿಯಮಾವಳಿಗಳಿಗೆ ವಿರುದ್ಧವಾಗಿರುತ್ತದೆ. ಇವರಲ್ಲಿ ಡಾ॥ ಗುರುಪ್ರಸಾದ್ ಮತ್ತು ಡಾ॥ ಕೃಷ್ಣಮೂರ್ತಿರವರು NET ನಲ್ಲಿ ಉತ್ತೀರ್ಣರಾಗದೇ ಇರುವುದರಿಂದ ಅವರು ನೀಡಿರುವ ಫಲಿತಾಂಶದ ಶೀಟನ್ನು ಖೋಟಾ (fake) ಎಂದು ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ.